ದಿನಾಂಕ **29-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಕೆ ಬಿ ಕೆ ವಾದಿ ಪರ ವಕೀಲರಿಂದ -

ನಾನು ದ್ವಿತಿಯ ಪಿ ಯುಸಿ ಓದಿರುತ್ತೇನೆ. ಈ ದಾವೆಯನ್ನು ಶರೀಫಾ ನದಾಫರವರು ನನ್ನ ಸೇರಿ 5 ಜನರ ಮೇಲೆ ಹೂಡಿರುತ್ತಾರೆ. ಆ 5 ಜನರ ಪೂರ್ಣ ಹೆಸರು ನನಗೆ ಹೇಳಲು ಬರುವುದಿಲ್ಲ. ಉಳಿದ 4 ಜನ ನನಗೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ. ದಾವಾಸ್ತಿ ಸರ್ವೆ ನಂ. 118 ಇರುತ್ತದೆ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರಲ್ಲಿ ಎಷ್ಟು ಬಿನ ಶೆತಕಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಖರೀದಿ ಮಾಡುವಾಗ ಸದ್ರಿ ಜಮೀನಿನ ಮೂಲ ಮಾಲಿಕರು ಯಾರು ಎಂದು ನಾನು ವಿಚಾರಣೆ ಮಾಡಿರುತ್ತೇನೆ. ಅವರ ಹೆಸರು ಮಹಮ್ಮದಶಫೀಕ ನದಾಫ . ನಾನು ಖರೀದಿ ಮಾಡುವಾಗ ಮಹಮ್ಮದಶಫೀಕ ನದಾಫ ಇವರ ಹೆಸರಿನಲ್ಲಿ ಜಾಗ ಇರಲಿಲ್ಲ. ನಾನು ಜಾಗವನ್ನು ರುದ್ರಪ್ಪ ಯಲ್ಲಪ್ಪ ಬೆನಕನಡೋಣಿ ಇವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ನಾನು ರುದ್ರಪ್ಪ ಯಲ್ಲಪ್ಪ ಬೆನಕನಡೋಣಿ ಇವರ ಹತ್ತಿರ ಖರೇದಿ ಮಾಡುವಾಗ ಸಿಟಿಎಸ್ ಉತಾರ ಮತ್ತು ಪುರಸಭೆ ಉತಾರ ಮತ್ತು ಎನ್ ಎ ಆದೇಶ ಪ್ರತಿಗಳನ್ನು ನೋಡಿರುತ್ತೇನೆ.

ಎನ್ ಎ ಆದೇಶ ಪ್ರತಿಯಲ್ಲಿ ಎಷ್ಟು ಎಕರೆ ಎನ್ ಎ ಆಗಿತ್ತು ಎಂದು ಹೇಳಲು ಬರುವುದಿಲ್ಲ. ವಾದಿಯ ಗಂಡನ ಜಮೀನ ಸರ್ವೆ ನಂ. 118 ರಲ್ಲಿ ಮೊದಲು 2 ಎಕರೆ ಎನ್ ಎ ಆಗಿದ್ದು ಅದರಲ್ಲಿ 1 ರಿಂದ 47 ಪ್ಲಾಟಗಳು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಎನ್ ಎ ಆದೇಶ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಲು ಯಾವುದೇ ಅಡಚಣೆ ಇಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಹತ್ತಿರ ಇರುವುದಿಲ್ಲ. ನಾವು ಹಾಜರ ಪಡಿಸಿದ ದಾಖಲೆಗಳ ಜೊತೆಗೆ ಎನ್ ಎ ಕಾಪಿ ಮತ್ತು ಟಿ ಎಂ ಸಿ ಉತಾರ ಹಾಜರ ಪಡಿಸಿರುವುದಿಲ್ಲ. ನಾವು ಖರೀದಿ ಮಾಡಿದ ಜಾಗ ಸಿಟಿಎಸ್ ನಂ. 4335 ಆಗಿರುತ್ತದೆ. ನಾವು ಖರೀದಿ ತೆಗೆದುಕೊಂಡ ನಂತರ ಕಟ್ಟಡ ಪರವಾನಿಗೆಯನ್ನು ಪಡೆದಿರುತ್ತೇವೆ . ಅದನ್ನು ಹಾಜರ ಪಡಿಸಿರುತ್ತೇವೆ.

ನಾವು ಖರೀದಿ ತೆಗೆದುಕೊಂಡ ಪ್ಲಾಟ ನಂ. 60 ರ ಚೆಕ್ಕುಬಂದಿ ಪೂರ್ವಕ್ಕೆ ಪ್ಲಾಟ ನಂ. 55 , ಪಶ್ಚಿಮಕ್ಕೆ ರಸ್ತೆ , ದಕ್ಷಿಣಕ್ಕೆ ರಸ್ತೆ, ಉತ್ತರಕ್ಕೆ ಪ್ಲಾಟ ನಂ. 59 ಇರುತ್ತದೆ. ಖರೀದಿ ಪತ್ರದ ಪ್ರಕಾರ ಸಿಟಿ ಸರ್ವೆ ಮತ್ತು ಪುರಸಭೆಯಲ್ಲಿ ದಾಖಲಿಸಲು ಅರ್ಜಿ ಕೊಟ್ಟಿರುತ್ತೇವೆ. ಆ ಪ್ರಕಾರ ಸಿಟಿಎಸ್ ನಂ. 4335/ಎ ಎಂದು ಸಿ ಟಿ ಎಸ್ ನಲ್ಲಿ ನಮೂದು ಆಗಿದೆ ಎಂದರೆ ಸರಿ. 4335/ಎ ಹೇಗೆ ದಾಖಲ ಆಯಿತು ಎಂದು ನಾನು ಚೌಕಾಶಿ ಮಾಡಿರುರುವುದಿಲ್ಲ. ಅದೇ ರೀತಿ ಪಟ್ಟಣ ಪಂಚಾಯತಿಯಲ್ಲಿ ಎಲ್ಲಾ ದಾಖಲಗಳನ್ನು ಹಚ್ಚಿ ಕೊಟ್ಟಿರುತ್ತೇವೆ ಎಂದರೆ ಸರಿ . ಆ ಪ್ರಕಾರ ನಿ.ಡಿ-48 ರಂತೆ ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ . ಅದರಲ್ಲಿ ಸಿಟಿಎಸ್ ನಂ. 4335 ಮಾತ್ರ ಇದೆ ಎಂದರೆ ಸರಿ .

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ